**ಒ.ಎಸ್.ನಂಬ್ರ: 214/2010 ಪಿ.ಡಬ್ಲ್ಯೂ: 3**

ದಿನಾಂಕ: 09-03-2022

ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು

ಪಾಟಿ ಸವಾಲು: ಶ್ರೀ ಪಿ.ಕೆ. ವಕೀಲರಿಂದ

ನಾನು ಈ ದಿನ ನ್ಯಾಯಾಲಯಕ್ಕೆ ಸಾಕ್ಷಿ ನುಡಿಯಲು ಬಂದಿರುತ್ತೇನೆ. ನಾನು ರಾಮಕೃಷ್ಣ ಹತ್ವಾರವರು ವಾದಿಗೆ ತಯಾರಿಸಿದ ಕರಾರು ಪತ್ರದ ದಾಖಲೆಗೆ ಸಹಿ ಮಾಡಿರುತ್ತೇನೆ. ಆದರೆ ಸ.ನಂಬರ ಯಾವುದು ಎಂದು ಈಗ ನೆನಪಿರುವುದಿಲ್ಲ. ಸಾವಿತ್ರಮ್ಮ ಹತ್ವಾರವರು ನನಗೆ ಸಾಕ್ಷಿಯಾಗಿ ಸಹಿ ಮಾಡಲು ಕೇಳಿಕೊಂಡಿರುತ್ತಾರೆ. ನಾನು ವೆಂಕಟರಮಣ ದಸ್ತಾವೇಜು ಬರಹಗಾರರ ಕಚೇರಿಗೆ ಬೆಳಿಗ್ಗೆ 10 ಗಂಟೆಗೆ ಆ ದಿನ ಬಂದಿರುತ್ತೇನೆ. ಕರಾರಿಗೆ ಒಳಪಟ್ಟ ಆಸ್ತಿಯನ್ನು ನಾನು ನೋಡಿರುತ್ತೇನೆ. ಸದರಿ ಆಸ್ತಿಯಲ್ಲಿ ಹಳೆಯ ಮನೆ ಇರುತ್ತದೆ. ಕರಾರು ಪತ್ರ ಮಾಡುವಾಗ ಅದಕ್ಕೆ ಸಂಬಂದಪಟ್ಟ ದಾಖಲೆಗಳನ್ನು ತೋರಿಸಿ ಓದಿ ಹೇಳಿರುತ್ತಾರೆ. ವೆಂಕಟರಮಣ ರವರು ಆ ದಿನ ನೋಟ್ಸ್ ಮಾಡಿಕೊಂಡಿರುವುದಿಲ್ಲ. ನಾನು ವೆಂಕಟರಮಣ ಹತ್ವಾರ್ ರವರ ಸಹಿ ನೋಡಿ ಗುರುತಿಸುತ್ತೇನೆ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿ ಅದರಲ್ಲಿ ಸಾವಿತ್ರಮ್ಮ ಮತ್ತು ವೆಂಕಟ್ರಮಣ ಹತ್ವಾರ್ ರವರ ಸಹಿಗಳನ್ನು ಗುರುತಿಸುವಂತೆ ಕೇಳಿಕೊಂಡಾಗ ಸಾಕ್ಷಿಯು ದಾಖಲೆಯ ಮೇಲಿರುವ ಸಹಿಗಳನ್ನು ನೋಡಿ ಗುರುತಿಸಿರುತ್ತಾರೆ. ಸದರಿ ದಾಖಲೆಯು ದಿ: 28-11-2003 ರ ಕ್ರಯ ಪತ್ರವಾಗಿದ್ದು ಸದರಿ ದಾಖಲೆಯನ್ನು ಈಗಾಗಲೇ ನಿಪಿ-11 ಎಂದೂ ಅದರ ಮೇಲಿರುವ ಸಾಕ್ಷಿಯ ಸಹಿಗಳನ್ನು ನಿಡಿ-1 ಎ ಮತ್ತು ಬಿ ಎಂದು ಗುರುತಿಸಲಾಯಿತು. ನಿಪಿ-6 ಇ ಮತ್ತು ಐ ಸಹಿಗಳನ್ನು ನಿಡಿ-1 ಎ ಮತ್ತು ಬಿ 1 ಎ ತೋರಿಸಿ ವ್ಯತ್ಯಾಸ ಇದ್ದಾವೆ ಎಂದರೆ ನಿಪಿ-6 ಐ ಕನ್ನಡದಲ್ಲಿದ್ದು ನಿಡಿ-1 ಬಿ ಇಂಗ್ಲೀಷ್ನಲ್ಲಿರುತ್ತದೆ ಎಂದು ನುಡಿಯುತ್ತಾರೆ. ನಿಡಿ-1 ಎ ಮತ್ತು ನಿಪಿ-6 ಇ ಸಹಿಗಳು ವ್ಯತ್ಯಾಸ ಇದ್ದಾವೆ ಎಂದರೆ ನನಗೆ ಕಂಡು ಬರುವುದಿಲ್ಲ.

ವಾದಿ ನಾಗರಾಜ ಭಟ್ ರವರು ನನಗೆ ಹಣ ನೀಡಿ ನಿಪಿ-6 ರ ದಾಖಲೆಗೆ ಸಹಿ ಮಾಡಿಸಿಕೊಂಡಿರುತ್ತಾರೆಂದರೆ ಸರಿಯಲ್ಲ. ಆ ಕಾರಣದಿಂದ ನಾನು ವಾದಿಯ ಪರವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ವೆಂಕಟರಮಣ ರವರ ಕಚೇರಿಗೆ ನಾನು ಹೋಗಿದ್ದೂ ಇಲ್ಲ ಅಲ್ಲಿ ಸಾಕ್ಷಿ ಹಾಕಿದ್ದೂ ಇಲ್ಲ ಎಂದರೆ ಸರಿಯಲ್ಲ. ನಾನು ಆ ದಿನ ಸಹಿ ಮಾಡಿದ್ದು ಬಿಟ್ಟರೆ ಬೇರೇನೂ ಮಾತುಕತೆ ಆಗಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲಾ ಸಂಗತಿಗಳು ಸುಳ್ಳಾಗಿರುತ್ತವೆ ಎಂದರೆ ಸರಿಯಲ್ಲ. ಸ್ವಾಧೀನ ಆ ದಿನ ಬಿಟ್ಟು ಕೊಟ್ಟಿದ್ದರೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ನಿಪಿ-6 ರ ಸ್ಟಾಂಪು ಮೌಲ್ಯ ಎಷ್ಟು ಎಂದು ನನಗೆ ಈಗ ನೆನಪಿರುವುದಿಲ್ಲ. ಸಾವಿತ್ರಮ್ಮ ಹತ್ವಾರ್ ಮತ್ತು ವೆಂಕಟರಮಣ ಹತ್ವಾರ್ ರವರು ಆ ದಿನ ನನ್ನನ್ನು ಕರೆದಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-6 ರ ಮೇಲಿರುವ ಸಾವಿತ್ರಮ್ಮ ಹತ್ವಾರ್ ಮತ್ತು ವೆಂಕಟರಮಣ ಹತ್ವಾರ್ ರವರ ಸಹಿಗಳನ್ನು ಸೃಷ್ಟಿ ಮಾಡಲಾಗಿದೆ ಎಂದರೆ ಸರಿಯಲ್ಲ. ಕರಾರು ಜಾರಿಗೊಳಿಸಲು ಅವಧಿ ನಿಗದಿಗೊಳಿಸಿರುವುದಿಲ್ಲ. ನಾನು ಹೇಳುವ ಹಾಗೆ ಸಾವಿತ್ರಮ್ಮ ಹತ್ವಾರ್ ಮತ್ತು ವೆಂಕಟರಮಣ ಹತ್ವಾರ್ ರವರು ದಸ್ತಾವೇಜು ಬರಹಗಾರರಾದ ಕೆ.ಜಿ.ವೆಂಕಟರಮಣ ರವರ ಕಚೇರಿಗೆ ಬಂದಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-6 ರ ಕರಾರು ಪತ್ರ ನೋಂದಣಿ ಮಾಡಿರುವುದಿಲ್ಲ. ನಿಪಿ-6 ದಾಖಲೆ ಸೃಷ್ಟಿಸಿದ ಕರಾರು ಪತ್ರ

ಎಂದು ಗೊತ್ತಿದ್ದರೂ ಸಹಾ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ಹೇಳಿದ ಹಾಗೆ ಸಾವಿತ್ರಮ್ಮ ಹತ್ವಾರ್ ಮತ್ತು ವೆಂಕಟ್ರಮಣ ಹತ್ವಾರ್ ರವರು ಸಹಿಗಳನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ

**ಓ.ಹೇ.ಕೇ.ಸ.ಇದೆ** **ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಕುಂದಾಪುರ**